(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ,

(ಪ್ರಶಾಂತಿ.ಜಿ)
9ನೇ ಅಪರ ನಗರ ಸಿವಿಲ್ ಮತ್ತು ಸತ್ರ
ನ್ಯಾಯಾಧೀಶರು, ಬೆಂಗಳೂರು.

ದಿ:**06-02-2026** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

ಮುಂದುವರಿದ ಪಾಟಿಸವಾಲು : ಅರ್ಜಿದಾರರ ಪರ ಶ್ರೀ. ಆರ್.ಸಿ.ಎಸ್ ವಕೀಲರಿಂದ :

56. ನನ್ನ ತಂದೆಯವರ ಕಾಲದಲ್ಲಿ ನನ್ನ ತಾಯಿಗೆ ಆದಾಯ ಇತ್ತಾ ಎಂದರೆ ಇಲ್ಲ ಎಂದು ಸಾಕ್ಷಿ ನುಡಿಯುತ್ತಾರೆ. ನನ್ನ ತಾಯಿಯ ತಂದೆ ರೈತರು ಮತ್ತು ಜಮೀನುದಾರರು. ನನ್ನ ತಾಯಿಗೆ ಅವರ ತಂದೆ ಯಾವುದಾದರೂ ಸ್ಥಿರ ಆಸ್ತಿ ಕೊಟ್ಟಿದ್ದಾರೆಯಾ ಎಂದರೆ ಸಾಕ್ಷಿ ಸ್ಥಿರ ಆಸ್ತಿ ಕೊಟ್ಟಿಲ್ಲ ಆದರೆ ಸಾಕಷ್ಟು ಚಿನ್ನಾಭರಣಗಳನ್ನು ನೀಡಿದ್ದಾರೆ ಎಂದು ನುಡಿಯುತ್ತಾರೆ. ನನ್ನ ತಾಯಿಗೆ ಅವರ ತಂದೆ ಯಾವುದೇ ಚಿನ್ನಾಭರಣಗಳನ್ನು ನೀಡಿಲ್ಲ ಎಂದರೆ ಸರಿಯಲ್ಲ. ನನ್ನ ತಾಯಿ ಬಡ ರೈತ ಕುಟುಂಬದಿಂದ ಬಂದವರು ಎಂದರೆ ಸರಿಯಲ್ಲ. ಆ ಕಾರಣದಿಂದ ನನ್ನ ತಾಯಿಯ ಭವಿಷ್ಯದ ದೃಷ್ಟಿಯಿಂದ ನಿ.ಪಿ.7 ರಲ್ಲಿ

ನಮೂದಿಸಿರುವ ಸ್ವತ್ತು ನಂ.9/19 ನ್ನು ನನ್ನ ತಂದೆ ಅವರ ಹೆಸರಿಗೆ ನೀಡಿದ್ದರು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ಸ್ವತ್ತು ನಂ.9/19 ನ್ನು ನನ್ನ ತಂದೆ ಅವರ ಹೆಸರಿಗೆ ನೀಡಿದ್ದಾರೆ ಎಂದು ನುಡಿಯುತ್ತಾರೆ. ಸ್ವತ್ತು ನಂ.9/19 ನ್ನು ನನ್ನ ತಂದೆ ಅವರ ಜೀವನಾಂಶಕ್ಕೆ ಮಾತ್ರ ನೀಡಿದ್ದಾರೆ ಎಂದರೆ ಸರಿಯಲ್ಲ.

57. ಒ.ಎಸ್.5256/2015 ರಲ್ಲಿ ನಾನು 2 ನೇ ಪ್ರತಿವಾದಿ. ನನಗೆ ಆ ದಾವೆಯ ಎಲ್ಲಾ ವಿಚಾರಗಳು ಗೊತ್ತಿದೆ. ಆ ದಾವೆಯಲ್ಲಿರುವ ಎಲ್ಲಾ ಸ್ವತ್ತುಗಳನ್ನು ನನ್ನ ತಂದೆಯ ಕಾಲದಲ್ಲೇ ಖರೀದಿ ಮಾಡಲಾಗಿತ್ತು ಎಂದರೆ ಸಾಕ್ಷಿ ಮಾಡಿದ್ದಾರೆ ಮತ್ತು ನನ್ನ ತಾಯಿಯ ಹಣದಲ್ಲಿ ಖರೀದಿ ಮಾಡಲಾಗಿತ್ತು ಎಂದು ನುಡಿಯುತ್ತಾರೆ. ಆ ಎಲ್ಲಾ ಆಸ್ತಿಗಳನ್ನು ನನ್ನ ತಾಯಿಯ ಹೆಸರಿನಲ್ಲಿ ಖರೀದಿ ಮಾಡಲಾಗಿತ್ತು. ನನ್ನ ತಾಯಿಯ ಹಣದಿಂದ ಸದರಿ ಆಸ್ತಿಗಳನ್ನು ಖರೀದಿ ಮಾಡಲಾಗಿತ್ತು ಎಂದು ಸದರಿ ಆಸ್ತಿಗಳ ಕ್ರಯ ಪತ್ರಗಳಲ್ಲಿ ಉಲ್ಲೇಖ ಮಾಡಿಲ್ಲ ಎಂದರೆ ಸಾಕ್ಷಿ ನನಗೆ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ. ಸದರಿ ಎಲ್ಲಾ ಆಸ್ತಿಗಳು ನನ್ನ ತಾಯಿಯ ಸ್ವಯಾರ್ಜಿತ ಆಸ್ತಿಗಳು. ಸದರಿ ಎಲ್ಲಾ ಆಸ್ತಿಗಳನ್ನು ಖರೀದಿಸಲು ನನ್ನ ತಂದೆಯೇ ಹಣ ನೀಡಿದ್ದಾರೆ ಎಂದರೆ ಸರಿಯಲ್ಲ. ಅದೇ ರೀತಿ ಅವುಗಳನ್ನು ಖರೀದಿಸಲು ನನ್ನ ತಾಯಿಯ ಬಳಿ ಹಣ ಇದ್ದಿರಲಿಲ್ಲ ಎಂದರೆ ಸರಿಯಲ್ಲ. ಸದರಿ ಆಸ್ತಿಗಳನ್ನು ಖರೀದಿಸಲು ನನ್ನ ತಾಯಿಗೆ ನನ್ನ ತಾತ ಹಣ ನೀಡಿದ್ದರು. ನನ್ನ ತಾತ ಸದರಿ ಆಸ್ತಿಗಳನ್ನು ಖರೀದಿಸಲು ಹಣ ನೀಡಿದ್ದರು ಎಂದು ಹೇಳಲು

ಯಾವುದಾದರೂ ದಾಖಲೆ ಇದೆಯಾ ಎಂದರೆ ಸಾಕ್ಷಿ ನನಗೆ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ.

58. ನನ್ನ ತಾಯಿ ಎಲ್ಲಾ ಮಕ್ಕಳನ್ನು ಸಮಾನವಾಗಿ ನೋಡುತ್ತಾರೆ ಎಂದು ನನ್ನ ತಂದೆಗೆ ನಂಬಿಕೆ ಇತ್ತು ಎಂದರೆ ಸರಿ. 9 ರ ಸಿರೀಸಿನ ಎಲ್ಲಾ ಸ್ವತ್ತುಗಳು ಇಂಡಸ್ಟ್ರಿಯಲ್ ಸ್ವತ್ತುಗಳು ಎಂದರೆ ಸರಿ. 9/1 ವಿಭಾಗವಾಗಿ 9/1, 9/1 ಎ ಇಂದ 9/1 ಹೆಚ್ ವರೆಗೆ ವಿಭಾಗವಾಗಿದೆ ಎಂದರೆ ಸರಿ. ಈ ಎಲ್ಲಾ ಸ್ವತ್ತುಗಳ ಬಾಡಿಗೆ ಕರಾರು ಪತ್ರಗಳು ನಮ್ಮ ಬಳಿಯೇ ಇದೆ. ಅದರಲ್ಲಿರುವ ಎಲ್ಲಾ ಬಾಡಿಗೆದಾರರು ಸಣ್ಣ ಕೈಗಾರಿಕಾ ಉದ್ದಿಮೆದಾರರು ಎಂದರೆ ಸರಿ. ಸದರಿ ಬಾಡಿಗೆ ಕರಾರು ಪತ್ರಗಳಲ್ಲಿ ಭೂ ಮಾಲೀಕರಾಗಿ ಯಾರು ಸಹಿ ಹಾಕಿದ್ದಾರೆ ಎಂದರೆ ಸಾಕ್ಷಿ ಕೆಲವು ದಾಖಲೆಗಳಲ್ಲಿ ನಾನು, ಕೆಲವು ದಾಖಲೆಗಳಲ್ಲಿ ನನ್ನ ತಾಯಿ ಹಾಗೂ ಇನ್ನೂ ಕೆಲವು ದಾಖಲೆಗಳಲ್ಲಿ ನನ್ನ ಅಕ್ಕ ತ್ರಿವೇಣಿ ಸಹಿ ಹಾಕಿದ್ದಾರೆ ಎಂದು ಸಾಕ್ಷಿ ಹೇಳುತ್ತಾರೆ. ಎಲ್ಲಾ ಬಾಡಿಗೆದಾರರು ಜಿ.ಎಸ್.ಟಿ ರಿಜಿಸ್ಟ್ರೇಷನ್ ಮಾಡಿಕೊಂಡಿದ್ದಾರೆ ಎಂದರೆ ನನಗೆ ಮಾಹಿತಿ ಇಲ್ಲ.

59. ನಾನು ಭೈರವೇಶ್ವರ ಆಟೋ ಮ್ಯಾಟ್ಸ್ ಮಾಡುವ ಸಂದರ್ಭದಲ್ಲಿ ನನ್ನ ತಂದೆ ನನಗೆ ಬಾಡಿಗೆ ಕರಾರು ಪತ್ರ ಮಾಡಿಕೊಟ್ಟಿದ್ದು ನಾನು ಅದನ್ನು ಟಿನ್ ನಂಬ್ರ ಪಡೆದುಕೊಳ್ಳಲು ಉಪಯೋಗಿಸಿದ್ದೆ ಎಂದರೆ ಸರಿ. ನನ್ನ ಬಾಡಿಗೆದಾರರು ಜಿ.ಎಸ್.ಟಿ ರಿಜಿಸ್ಟ್ರೇಷನ್ ಮಾಡಿಕೊಂಡಿದ್ದಾರೆ ಮತ್ತು ಆ ಬಗ್ಗೆ ನನಗೆ ಗೊತ್ತಿದೆ ಎಂದರೆ ಸರಿಯಲ್ಲ. ಅವರು ಹಾಕಿಕೊಂಡ ನಾಮ ಫಲಕಗಳಲ್ಲಿ

ಜಿ.ಎಸ್.ಟಿ ನಂಬ್ರ ನಮೂದಾಗಿದೆ ಎಂದರೆ ನಾನು ನೋಡಿಲ್ಲ. ನಾನು ದಿನನಿತ್ಯ ನಮ್ಮ ಸ್ವತ್ತಿನ ಜಾಗಗಳಿಗೆ ಹೋಗುತ್ತೇನೆ.

60. ನಾನು ಬಾಡಿಗೆದಾರರ ಬಳಿ 10 ತಿಂಗಳ ಮುಂಗಡ ಹಣ ತೆಗೆದುಕೊಂಡಿದ್ದೇನೆ ಎಂದರೆ ಸರಿ. ಎಲ್ಲಾ ಬಾಡಿಗೆ ಕರಾರು ಪತ್ರಗಳನ್ನು ಟೈಪಿಸ್ಟ್ ತಯಾರು ಮಾಡುತ್ತಾರೆ. ನಾನು ಮಾಹಿತಿ ನೀಡಿದಂತೆ ಅವರು ಟೈಪ್ ಮಾಡುತ್ತಾರೆ. ಆ ಬಗ್ಗೆ ನಾನು ಕಾನೂನು ಅಭಿಪ್ರಾಯ ಪಡೆದುಕೊಂಡಿದ್ದೇನೆ. ಯಾವುದೇ ಬಾಡಿಗೆ ಕರಾರು ಪತ್ರಗಳು ನೋಂದಣಿಯಾಗಿಲ್ಲ. ಬಾಡಿಗೆಯಿಂದ ಬರುವ ಆದಾಯದ ಮೇಲೆ ನಾನು ಜಿ.ಎಸ್.ಟಿ ಕಟ್ಟುತ್ತಿಲ್ಲ. ಆ ಬಗ್ಗೆ ನಾನು ಸಲಹೆ ತೆಗೆದುಕೊಂಡಿದ್ದೇನಾ ಎಂದರೆ ಸಾಕ್ಷಿ ನನಗೆ ಮಹಿತಿ ಇಲ್ಲ ಎಂದು ನುಡಿಯುತ್ತಾರೆ.

61. ನಾನು ಡಾಲ್ ಫಿನ್ ಕೆಮ್ ಇಂಟರ್ ನ್ಯಾಷನಲ್ ಕಂಪೆನಿಯ ಹೆಸರು ಕೇಳಿದ್ದೇನೆ. ಅದು ಪ್ರೊಪ್ರೈಟರ್ ಷಿಪ್ ಗೆ ಸಂಬಂಧಿಸಿದ್ದು. ಅದರ ಪ್ರೊಪ್ರೈಟರ್ ಯಾರು ಎಂದು ನನಗೆ ಹೆಸರು ನೆನಪಿಲ್ಲ. ಸದರಿ ಕಂಪೆನಿಯ ಮುಖ್ಯ ಕಚೇರಿ ಎಲ್ಲಿದೆ ಎಂದು ನನಗೆ ಮಾಹಿತಿ ಇಲ್ಲ. ಸ್ವತ್ತು ನಂ.9/1 ನ್ನು ಡಾಲ್ ಫಿನ್ ಕೆಮ್ ಇಂಟರ್ ನ್ಯಾಷನಲ್ ಕಂಪೆನಿಗೆ ಬಾಡಿಗೆ ಕೊಟ್ಟಿದ್ದೇನೆ. ಈಗ ನಾನು ನೋಡುತ್ತಿರುವ ದಾಖಲೆ ಅವರಿಗೆ ಬಾಡಿಗೆ ನೀಡಿದ್ದಕ್ಕಾಗಿ ಮಾಡಿಕೊಂಡ ಕರಾರು ಪತ್ರ ಎಂದರೆ ಸರಿ. ಸದರಿ ದಾಖಲೆಯನ್ನು ನಿ.ಪಿ.11 ಎಂದು ಗುರುತಿಸಲಾಯಿತು. ಸದರಿ ದಾಖಲೆಯಲ್ಲಿ ನನ್ನ

ತಾಯಿ ನನ್ನ ಅಕ್ಕ ಮತ್ತು ನನ್ನ ಸಹಿ ಇದೆ. ನಾನು ಚೆಕ್ ಹಾಗೂ ನಗದು ರೂಪದಲ್ಲಿ ಬಾಡಿಗೆ ತೆಗೆದುಕೊಳ್ಳುತ್ತಿದ್ದು ಎರಡನ್ನೂ ಸಹ ಖಾತೆಗೆ ಹಾಕುತ್ತೇನೆ. ನನ್ನ ಖಾತೆಯ ಸ್ಟೇಟ್ ಮೆಂಟ್ ಆಫ್ ಅಕೌಂಟ್ಸನ್ನು ತೆಗೆದುಕೊಂಡರೆ ಚೆಕ್ ಹಾಗೂ ನಗದು ರೂಪದಲ್ಲಿ ಬಾಡಿಗೆ ಜಮಾ ಆಗುತ್ತಿದ್ದ ಬಗ್ಗೆ ದಾಖಲೆ ಸಿಗುತ್ತದೆ ಎಂದರೆ ಸರಿ. ಅದನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಲು ನನಗೆ ತೊಂದರೆ ಇದೆಯಾ ಎಂದರೆ ಸಾಕ್ಷಿ ನಮ್ಮ ವಕೀಲರಿಗೆ ಕೇಳಿ ಹಾಜರುಪಡಿಸುತ್ತೇವೆ ಎಂದು ನುಡಿಯುತ್ತಾರೆ. ಬಾಡಿಗೆಯನ್ನು ನಗದಾಗಿ ತೆಗೆದುಕೊಳ್ಳುವ ಬಗ್ಗೆ ಬಾಡಿಗೆ ಕರಾರು ಪತ್ರದಲ್ಲಿ ನಮೂದಾಗಿದೆಯಾ ಎಂದರೆ ಇಲ್ಲ. ನಾನು ನಗದು ರೂಪದಲ್ಲಿ ಬಾಡಿಗೆ ಪಡೆಯುವ ಬಗ್ಗೆ ಯಾವುದೇ ರಶೀದಿ ಕೊಡುತ್ತಿಲ್ಲ. ನನ್ನ ಬ್ಯಾಂಕ್ ಖಾತೆಗೆ ನಾನು ಒಬ್ಬನೇ ಖಾತೆದಾರ. ಬಾಡಿಗೆ ಕರಾರು ಪತ್ರದಲ್ಲಿ 3 ಜನ ಸಹಿ ಮಾಡಿದ್ದು ಬಾಡಿಗೆಯನ್ನು ಒಬ್ಬರಿಗೇ ನೀಡಬೇಕೆಂದು ಉಲ್ಲೇಖ ಇದೆಯಾ ಎಂದರೆ ಸಾಕ್ಷಿ ಅದು ನಮ್ಮ ಒಳಗಿನ ತಿಳುವಳಿಕೆ ಎಂದು ಸಾಕ್ಷಿ ನುಡಿಯುತ್ತಾರೆ.

62. ನನ್ನ ತಕರಾರಿನಲ್ಲಿ ಸಹೋದರಿಯರಿಗೆ ನೀಡಿದ ಆಸ್ತಿಗಳ ವಿವರವನ್ನು ಉಲ್ಲೇಖಿಸಿಲ್ಲ. ಅದೇ ರೀತಿ ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಸಹೋದರಿಯರಿಗೆ ನೀಡಿದ ಆಸ್ತಿಗಳ ವಿವರ ಉಲ್ಲೇಖಿಸಿಲ್ಲ. ಆ ರೀತಿಯಾಗಿ ಉಲ್ಲೇಖಿಸಲು ನನಗೆ ಯಾವುದೇ ತೊಂದರೆ ಇದ್ದಿರಲಿಲ್ಲ ಎಂದರೆ ಸಾಕ್ಷಿ ನಾನು ಅದನ್ನು ಲೀಗಲ್ ಆಗಿ

ಕೇಳಬೇಕು ಎಂದು ನುಡಿಯುತ್ತಾರೆ. ನನ್ನ ತಕರಾರು ಪತ್ರ ಮತ್ತು ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ತಯಾರು ಮಾಡುವ ಸಂದರ್ಭದಲ್ಲಿ ಮೇಲೆ ಹೇಳಿದ ವಿಚಾರಗಳ ಬಗ್ಗೆ ಮಾಹಿತಿ ಕೊಟ್ಟಿರಲಿಲ್ಲವೇ ಎಂದರೆ ಸಾಕ್ಷಿ ನನಗೆ ನೆನಪಿಲ್ಲ ಎಂದು ನುಡಿಯುತ್ತಾರೆ.

63. ಒ.ಎಸ್.8804/2015 ನ್ನು ಯಾವ ಕಾರಣಕ್ಕಾಗಿ ಹಾಕಿದ್ದಾರೆ ಎಂದು ನನಗೆ ಗೊತ್ತಿದೆ. ವಾದ ಪತ್ರದ ಜೊತೆಗೆ ಹಾಕಿರುವ ವೆರಿಫೈಯಿಂಗ್ ಅಫಿಡವಿಟಿಗೆ ನಾನು ಸಹಿ ಹಾಕಿದ್ದೇನೆ. ಅದರಲ್ಲಿಯೂ ಸಹ ನನ್ನ ಸಹೋದರಿಯರಿಗೆ ನೀಡಿದ ಆಸ್ತಿಗಳ ಬಗ್ಗೆ ಉಲ್ಲೇಖಿಸಿಲ್ಲ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಅದನ್ನು ಉಲ್ಲೇಖಿಸಿದ್ದೀರಾ ಎಂದರೆ ಇಲ್ಲ. ಸದರಿ ದಾವೆಯಲ್ಲಿಯೂ ಸಹ ನನ್ನ ವಾದ ಪತ್ರ ಮತ್ತು ಮುಖ್ಯ ವಿಚಾರಣಾ ಪ್ರಮಾಣ ಪತ್ರವನ್ನು ತಯಾರಿಸಲು ನಾನು, ನನ್ನ ತಾಯಿ ಮಾಹಿತಿ ಕೊಟ್ಟಿದ್ದೆವು. ನನ್ನ ಸಹೋದರಿಯರು ಸದರಿ ವಾದ ಪತ್ರಕ್ಕೆ ಸಹಿ ಹಾಕಿದ್ದಾರೆ. ಸಹಿ ಹಾಕುವ ಸಂದರ್ಭದಲ್ಲಿ ಅದರಲ್ಲಿ ಏನು ಬರೆದಿದೆ ಎಂಬ ಬಗ್ಗೆ ಮಾಹಿತಿ ಕೊಟ್ಟಿದ್ದೀರಾ ಎಂದರೆ ಸಾಕ್ಷಿ ಏನು ಬರೆದಿದೆ ಎಂದು ಓದಿ ನೋಡಿ ಅವರು ಸಹಿ ಹಾಕಿದ್ದಾರೆ ಎಂದು ನುಡಿಯುತ್ತಾರೆ. ನನ್ನ ಸಹೋದರಿಯರಿಗೆ ಇಂಗ್ಲೀಷ್ ಓದಲು ಬರುವುದಿಲ್ಲ ಮತ್ತು ಹಾಗೆಯೇ ಅವರ ಕೈಯಿಂದ ಸಹಿ ಹಾಕಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ.

64. ಒ.ಎಸ್.5256/2015 ನ್ನು ನನ್ನ ತಮ್ಮ ಯಾವ ಕಾರಣಕ್ಕಾಗಿ ಹಾಕಿದ್ದಾರೆ ಎಂದು ನನಗೆ ಗೊತ್ತಿಲ್ಲ. ಅದಕ್ಕೂ ಹಾಗೂ ಈ ದಾವಾ ಆಸ್ತಿಗೂ ಯಾವುದೇ ಸಂಬಂಧ ಇಲ್ಲ. ಸದರಿ ದಾವೆಯಲ್ಲಿ ನನ್ನ ಸಹೋದರಿಯರಿಗೆ ನೀಡಿದ ಆಸ್ತಿಗಳ ಬಗ್ಗೆ ಉಲ್ಲೇಖಿಸಿಲ್ಲವೇ ಎಂದರೆ ಸಾಕ್ಷಿ ನನಗೆ ಮಾಹಿತಿ ಇಲ್ಲ ಮತ್ತು ನೋಡಬೇಕು ಎಂದು ನುಡಿಯುತ್ತಾರೆ.

65. ನನ್ನ ಸಹೋದರಿಯರಿಗೆ ನನ್ನ ತಂದೆ ಕೊಟ್ಟಿರುವ ಆಸ್ತಿಗಳ ಮೇಲೆ ದಾವೆ ಇದೆಯಾ ಎಂದರೆ ಸಾಕ್ಷಿ ಅವರನ್ನೇ ಕೇಳಬೇಕು ಎಂದು ನುಡಿಯುತ್ತಾರೆ.

66. ಸ್ವತ್ತು ನಂ.9/19 ರ ಬಗ್ಗೆ ನನ್ನ ತಕರಾರಿನಲ್ಲಿ ಉಲ್ಲೇಖ ಮಾಡಿಲ್ಲ. ಅದೇ ರೀತಿ ನನ್ನ ಮುಖ್ಯ ವಿಚಾರಣೆಯಲ್ಲಿಯೂ ಸಹ ಅದನ್ನು ಉಲ್ಲೇಖಿಸಿಲ್ಲ. ಅದೇ ರೀತಿ ಒ.ಎಸ್.5256/2015 ರಲ್ಲಿಯೂ ಮತ್ತು ಒ.ಎಸ್.8804/2015 ರಲ್ಲಿಯೂ ಆ ಬಗ್ಗೆ ಉಲ್ಲೇಖಿಸಿಲ್ಲ. ಸ್ವತ್ತು ನಂ.9/19 ಈಗ ಯಾರ ಸ್ವಾಧೀನದಲ್ಲಿದೆ ಎಂದರೆ ಸಾಕ್ಷಿ ಅದಕ್ಕೂ ಹಾಗೂ ಈ ದಾವೆಗೂ ಯಾವುದೇ ಸಂಬಂಧ ಇಲ್ಲ ಮುಂದುವರಿದು ನನ್ನ ತಾಯಿಯ ಸ್ವಾಧೀನದಲ್ಲಿದೆ ಎಂದು ನುಡಿಯುತ್ತಾರೆ. ಸ್ವತ್ತು ನಂ.9/19 ರ ಖಾತಾ ಈಗ ನನ್ನ ಮತ್ತು ನನ್ನ ಅಕ್ಕ ತ್ರಿವೇಣಿಯವರ ಹೆಸರಿನಲ್ಲಿದೆ. ನಿ.ಪಿ.8 ರಿಂದ 10 ರ ದಾಖಲೆಗಳ ಆಧಾರದಲ್ಲಿ ಸ್ವತ್ತು ನಂ.9/19 ರ ಖಾತಾವನ್ನು ನಮ್ಮ ಹೆಸರಿಗೆ ಮಾಡಿಸಿಕೊಂಡಿದ್ದೇವೆ ಎಂದರೆ ಸರಿ.

(ಮುಂದುವರಿದ ಪಾಟಿ ಸವಾಲಿಗೆ ಅವಕಾಶ ಕೇಳಿದ್ದರಿಂದ, ಅವಕಾಶ ನೀಡಲಾಯಿತು).

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ ಇದೆ,**

(ಪ್ರಶಾಂತಿ.ಜಿ)
**9ನೇ ಅಪರ ನಗರ ಸಿವಿಲ್ ಮತ್ತು ಸತ್ರ**
**ನ್ಯಾಯಾಧೀಶರು, ಬೆಂಗಳೂರು.**